**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.218/2025**

ಪಿರ್ಯಾದುದಾರರು : ಸರ್ಕಾರದ ಪರ ದಾಬಸ್ ಪೇಟೆ ಪೊಲೀಸರು

- ವಿರುದ್ಧ -

ಆರೋಪಿ : ನಾಗೇಶ್ ಎ.ಜಿ.
ತಂದೆ: ಗೋಪಾಲ್,
ವಯಸ್ಸು 33 ವರ್ಷ
ವಾಸ: ಅಗಳಕುಪ್ಪೆ ಗ್ರಾಮ,
ಸೋಂಪುರ ಹೋಬಳಿ, ನೆಲಮಂಗಲ
ತಾಲ್ಲೂಕು,ಬೆಂಗಳೂರು ಜಿಲ್ಲೆ.

## ದೋಷಾರೋಪಣೆ

ನಾನು ಬಿ.ಎಸ್.ರೇಖಾ, ಬಿ.ಎ.(ಲಾ), ಎಲ್ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನೀವು-ಆರೋಪಿಯಾದ ನಾಗೇಶ್ ಎ.ಜಿ. ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿ, ಅಗಳಕುಪ್ಪೆ ಗ್ರಾಮ ಪಂಚಾಯಿತಿ ಕಾರ್ಯಾಲಯದ ಬಳಿ ಇರುವ ರಮೇಶ್ ಎಂಬುವರ ಮನೆಯಲ್ಲಿ ಆರೋಪಿಯಾದ ನೀನು ಬಾಡಿಗೆಗೆ ವಾಸವಾಗಿದ್ದು ಪ್ರ.ವ.ವರದಿ ದಾಖಲಾದ ದಿನಾಂಕಕ್ಕೆ ಸುಮಾರು 3 ತಿಂಗಳ ಹಿಂದೆ ಚಾಸಾ. 1 ರವರ ಬಳಿ ರೂಪಾಯಿ 10 ಸಾವಿರ ಹಣ ಸಾಲ ಪಡೆದುಕೊಂಡಿದ್ದು, ಸ್ವಲ್ಪ ದಿನಗಳ ನಂತರ ಚಾಸಾ. 1 ರವರು ಆರೋಪಿಯಾದ ನಿನ್ನ ಬಳಿ ಹಣ ವಾಪಸ್ ಕೇಳಿದಾಗ ಆರೋಪಿಯಾದ ನೀನು ನನ್ನ ಬಳಿ ಹಣ ಇರುವುದಿಲ್ಲ, ಹಣ ಇದ್ದಾಗ

ಕೊಡುತ್ತೇನೆ ಎಂದು ಹೇಳಿದ್ದರೂ ಚಾಸಾ.1 ರವರು ಪದೇ ಪದೇ ಹಣ ವಾಪಸ್ ಕೇಳಿದ್ದರಿಂದ, ಇವನು ಪದೇ ಪದೇ ಹಣ ಕೇಳುತ್ತಾನೆ ಎಂದು ದ್ವೇಷ ಬೆಳೆಸಿಕೊಂಡು, ಇವನಿಗೆ ಒಂದು ಗತಿ ಕಾಣಿಸಬೇಕೆಂದು ಆರೋಪಿಯಾದ ನೀನು ಸಮಯಕ್ಕೆ ಕಾಯುತ್ತಿದ್ದು, ದಿನಾಂಕ 23.02.2025 ರಂದು ರಾತ್ರಿ ಸುಮಾರು 12:15 ಗಂಟೆ ಸಮಯದಲ್ಲಿ ಆರೋಪಿಯಾದ ನೀನು ವಾಸವಾಗಿರುವ ಮನೆಯ ಮುಂಭಾಗ ಆರೋಪಿಯಾದ ನೀನು, ಚಾಸಾ. 3 ರಿಂದ 5 ರವರುಗಳು ಜೋರಾಗಿ ಮಾತನಾಡಿಕೊಂಡು ನಿಂತಿದ್ದಾಗ, ಏನೋ ಗಲಾಟೆ ನಡೆಯುತ್ತಿರಬಹುದು ಎಂದು ಚಾಸಾ. 1 ಮತ್ತು 2 ರವರು ತಮ್ಮ ಮನೆಯಿಂದ ಆಚೆ ಬಂದು ನೋಡುತ್ತಾ ನಿಂತಿದ್ದನ್ನು ಆರೋಪಿಯಾದ ನೀನು ನೋಡಿ, ಅವೇಳೆಯಾಗಿದ್ದರಿಂದ ಇವನು ಪದೇ ಪದೇ ಹಣ ಕೇಳುತ್ತಾನೆ, ಇವನಿಗೆ ಒಂದು ಗತಿ ಕಾಣಿಸಲು ಇದೇ ಸರಿಯಾದ ಸಮಯ ಎಂದುಕೊಂಡು ಆರೋಪಿಯಾದ ನೀನು ನಿನ್ನ ಮನೆಯ ಕಾಂಪೌಂಡ್ ಒಳಗೆ ಬಿದ್ದಿದ್ದ ಒಂದು ದೊಣ್ಣೆಯನ್ನು ತಂದು ಚಾಸಾ. 1 ರವರನ್ನು ಕುರಿತು ಏನೋ ಬೋಳಿ ಮಗನೆ ನನ್ನನ್ನೇ ದುರುಗುಟ್ಟಿಕೊಂಡು ನೋಡುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು, ಭಾರತೀಯ ನ್ಯಾಯಾ ಸಂಹಿತೆ ಕಲಂ 352 ರನ್ವಯ ಅಪರಾಧ ಮಾಡಿರುತ್ತೀರಿ ಮತ್ತು

ಎರಡನೇಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ, ಆರೋಪಿಯಾದ ನೀನು ಚಾಸಾ. 1 ರವರ ಕುರಿತು ನಿನ್ನನ್ನು ಇವತ್ತು ಕೊಲೆ ಮಾಡಿಯೇ ತೀರುತ್ತೇನೆ ಎಂದು ಚಾಸಾ. 1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿಯಾದ ನೀನು ನಿನ್ನ ಕೈಲಿದ್ದ ದೊಣ್ಣೆಯಿಂದ ಚಾಸಾ. 1 ರವರ ತಲೆಗೆ ಹೊಡೆಯಲು ಪ್ರಯತ್ನಿಸಿದ್ದು ಆದ್ದರಿಂದ ಆರೋಪಿಯಾದ ನೀನು ಭಾರತೀಯ ನ್ಯಾಯಾ ಸಂಹಿತೆ ಕಲಂ 109 ರನ್ವಯ ಅಪರಾಧ ಮಾಡಿರುತ್ತೀರಿ ಮತ್ತು

ಮೂರನೇಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ, ಆರೋಪಿಯಾದ ನೀನು ನಿನ್ನ ಕೈಲಿದ್ದ ದೊಣ್ಣೆಯಿಂದ ಚಾಸಾ. 1 ರವರ ತಲೆಗೆ ಹೊಡೆಯಲು ಹೋದಾಗ ಚಾಸಾ. 1 ರವರು ತನ್ನ ತಲೆಗೆ ಬೀಳುವ ಏಟನ್ನು ತಪ್ಪಿಸಿಕೊಳ್ಳಲು ತನ್ನ ಎರಡೂ ಕೈಗಳನ್ನು ಅಡ್ಡ ಹಿಡಿದಿದ್ದರಿಂದ ಏಟು ಚಾಸಾ. 1 ರವರ ಬಲಗೈಗೆ ಬಿದ್ದು ತೀವ್ರ ಸ್ವರೂಪದ ಗಾಯವುಂಟಾಗಿದ್ದು ಆದ್ದರಿಂದ ಆರೋಪಿಯಾದ ನೀನು ಭಾರತೀಯ ನ್ಯಾಯಾ ಸಂಹಿತೆ ಕಲಂ 118 (2) ರನ್ವಯ ಅಪರಾಧ ಮಾಡಿರುತ್ತೀರಿ.

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದಿನ ದಿನಾಂಕ **17** ನೇ ಮಾರ್ಚ್, **2026**)

(ಶ್ರೀಮತಿ ಬಿ.ಎಸ್.ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.

**IN THE COURT OF THE PRL. DISTRICT AND SESSIONS JUDGE, BENGALURU RURAL DISTRICT, BENGALURU.**

**SC No.218/2025**

Complainant : Dabaspete Police station

V/s

Accused : Nagesh A G

**PLEA OF THE ACCUSED**

1. Have you understood the charge framed, read over and explained to you?
   Ans:

2. Do you plead guilty or claims to be tried?
   Ans:

(Certified that in the open Court, charge is read over and explained to the accused in Kannada/English/Hindi and answers given by the accused are recorded).

Dated: 17.03.2026.

(Smt.B.S.Rekha)
Prl. District and Sessions Judge,
Bengaluru Rural District,
Bengaluru.

Signature of the accused.